ವಿಶ್ವವಾಣಿ

ಸಂಪಾದಕೀಯ

ಎಚ್ಚರಿಕೆಯ ಗಂಟೆ

ಕರ್ನಾಟಕದಲ್ಲಿ ಡೆಂಘೀ ಜ್ವರ ವ್ಯಾಪಕವಾಗಿ ಹರಡುತ್ತಿರುವುದು ಮತ್ತು ರಾಜಧಾನಿ ಬೆಂಗಳೂರಿನಲ್ಲಿ ಅದರ ನಾಗಾಲೋಟ ದಾಖಲಾಗಿರುವುದು ಆತಂಕಕಾರಿ ಸಂಗತಿಯೇ ಸರಿ. ಕಳೆದ 9 ತಿಂಗಳಲ್ಲಿ 12,239 ಮಂದಿಯಲ್ಲಿ ಡೆಂಘೀ ಸೋಂಕು ಕಾಣಿಸಿಕೊಂಡಿದೆ ಹಾಗೂ ಸೋಂಕಿನ ಪ್ರಮಾಣ ಶೇ.138ರಷ್ಟು ಹೆಚ್ಚಳವಾಗಿದೆ ಎಂಬುದು ನಿಜಕ್ಕೂ ನಿರ್ಲಕ್ಷಿಸುವಂಥ ಸಂಗತಿಗಳಲ್ಲ. ಇನ್ನು ಬೆಂಗಳೂರು ವ್ಯಾಪ್ತಿಯಲ್ಲಿ ಕಳೆದ 9 ತಿಂಗಳಲ್ಲಿ 7,353 ಡೆಂಘೀ ಪ್ರಕರಣಗಳು ದಾಖಲಾಗಿದ್ದು, ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿ 2 ಸಾವು ಸಂಭವಿಸಿರುವ ಸುದ್ದಿಯೂ ಬಂದಿದೆ. ಇದು ಖಂಡಿತ ನಮಗೆಲ್ಲರಿಗೂ ಎಚ್ಚರಿಕೆಯ ಗಂಟೆ.

ಸೊಳ್ಳೆ ನಿಯಂತ್ರಣ, ಲಾರ್ವಾಗಳ ನಾಶ ಮತ್ತು ಜಾಗೃತಿ ಕಾರ್ಯಕ್ರಮದಂಥ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡಿದ್ದರೂ ಡೆಂಘೀ ಜ್ವರದ ರುದ್ರನರ್ತನ ಅಬಾಧಿತವಾಗಿದೆ. ಇದರ ಹೊಣೆಗಾರಿಕೆಯ ಗಂಟೆಯನ್ನು ಯಾರ ಕೊರಳಿಗೆ ಕಟ್ಟಬೇಕು ಎಂದು ಲೆಕ್ಕಾಚಾರ ಹಾಕುವುದಕ್ಕಿಂತ, ಈ ಪಿಡುಗಿನ ನಿವಾರಣೆಗೆ ಆರೋಗ್ಯ ಇಲಾಖೆಯ ವಿವಿಧ ಸ್ತರದ ಸಿಬ್ಬಂದಿ, ಸಾರ್ವಜನಿಕರು ಮತ್ತು ಸಂಘ-ಸಂಸ್ಥೆಗಳು ಸಮರೋಪಾದಿಯಲ್ಲಿ ತೊಡಗಿಸಿಕೊಳ್ಳಬೇಕಾಗಿದೆ.

ಮಾನವ ದೇಹಕ್ಕೆ ಅಪ್ಪಳಿಸುವ ಯಾವುದೇ ಕಾಯಿಲೆಯ ವಿರುದ್ಧ ಸೆಣಸುವ ಬಿಳಿಯ ರಕ್ತಕಣಗಳನ್ನೇ ಡೆಂಘೀ ಜ್ವರದ ಸೋಂಕು ತಿಂದುಹಾಕುವುದರಿಂದ ಇದಕ್ಕೆ ಲಗಾಮು ಹಾಕುವುದು ಕಷ್ಟಕರ. ಸೊಳ್ಳೆಗಳು ಉತ್ಪತ್ತಿಯಾಗಿ ಹೇರಳ ವ್ಯಾಪಿಸುವುದಕ್ಕೆ ಕಾರಣವಾಗುವುದು ಎಲ್ಲೆಂದರಲ್ಲಿ ಕಟ್ಟಿಕೊಳ್ಳುವ ನೀರು. ತಿಪ್ಪೆಗುಂಡಿಗಳ ಅಸಮರ್ಪಕ ನಿರ್ವಹಣೆ, ಚರಂಡಿಗಳಲ್ಲಿ ಕೊಳಚೆ ನೀರು ಬೇಕಾಬಿಟ್ಟಿ ಹರಿಯುವಿಕೆ, ಘನತ್ಯಾಜ್ಯ ವಿಲೇವಾರಿಯಲ್ಲಿನ ಬೇಜವಾಬ್ದಾರಿತನ, ಕಟ್ಟಡ ಕಾಮಗಾರಿ ಸೇರಿದಂತೆ ಮತ್ತಿತರ ಉದ್ದೇಶಗಳಿಗಾಗಿ ಮಾಡಿಕೊಳ್ಳುವ ನೀರಿನ ಸಂಗ್ರಹವನ್ನು ಸೂಕ್ತವಾಗಿ ಕಾಪಿಟ್ಟುಕೊಳ್ಳದಿರುವುದು ಇವೇ ಮೊದಲಾದ ಬಾಬತ್ತುಗಳು ಸೊಳ್ಳೆಗಳ ಉತ್ಪತ್ತಿಗೆ ಮೂಲಕಾರಣವಾಗುತ್ತವೆ ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ. ಇದು ಗೊತ್ತಿದ್ದರೂ ಸೂಕ್ತ ನಿರ್ವಹಣೆಗೆ ಸಂಬಂಧಪಟ್ಟ ಆಡಳಿತ ಮುಂದಾಗದಿರುವುದು ದೊಡ್ಡ ಸಮಸ್ಯೆಗೆ ಹೇತುವಾಗುತ್ತದೆ; ಬೆಳೆಯಬಿಟ್ಟರೆ ಪೆಡಂಭೂತವಾಗುತ್ತದೆ. ಈ ದಿಕ್ಕಿನಲ್ಲಿ ಶ್ರಮಿಸದಿದ್ದರೆ ಮಾರಕವಾಗುವುದು ನಮಗೇ ಎಂಬುದನ್ನು ಜನತೆಯೂ ಅರಿಯಬೇಕು. ಪ್ರಕೃತಿ ವಿಕೋಪದಿಂದಾಗುವ ರೋಗ-ರುಜಿನಗಳು ಅಥವಾ ಸಾವು-ನೋವುಗಳ ನಿಯಂತ್ರಣ ನಮ್ಮ ಕೈಯಲ್ಲಿಲ್ಲ. ಆದರೆ ಮಾನವನಿರ್ಮಿತ ಎಡವಟ್ಟುಗಳ ಪ್ರಮಾಣ ಮತ್ತು ತೀವ್ರತೆಯನ್ನಾದರೂ ತಗ್ಗಿಸಬಹುದಲ್ಲವೇ? ಮನುಷ್ಯನ ದುರಾಸೆ ಮತ್ತು ಮಿತಿಮೀರಿದ ನಗರೀಕರಣದ ಪರಿಣಾಮ ಕಾಡುಗಳ ಸಾಂದ್ರತೆ/ದಟ್ಟಣೆ ತಗ್ಗಲು ಶುರುವಾಗಿ ಅದು ಏನೆಲ್ಲಾ ಅವಾಂತರಗಳನ್ನು ಸೃಷ್ಟಿಸಿತು ಎಂಬುದನ್ನು ಕೊಡಗು ಜಿಲ್ಲೆಯಲ್ಲಿ ದಾಖಲಾದ ಭೂಕುಸಿತದ ನಿದರ್ಶನಗಳು ತೋರಿಸಿಕೊಟ್ಟಿವೆ. ಇದು ಮರುಕಳಿಸಬಾರದು ಎಂದಾದಲ್ಲಿ, ಸಂಘಟಿತ ಯತ್ನಗಳು ಮತ್ತು ವಿವೇಚನಾಯುಕ್ತ ಕ್ರಮಗಳು ಶೀಘ್ರವಾಗಿ ಕಾರ್ಯರೂಪಕ್ಕೆ ಬರಬೇಕಿವೆ.

> **ಬಿಳಿಯ ರಕ್ತಕಣಗಳನ್ನೇ ಡೆಂಘೀ ಜ್ವರದ ಸೋಂಕು ತಿಂದುಹಾಕುವುದರಿಂದ ಇದಕ್ಕೆ ಲಗಾಮು ಹಾಕುವುದು ಕಷ್ಟಕರ**

ಚಿತ್ರಸ್ಫೂರ್ತಿ

ತನ್ನ ಖಾದ್ಯಗಳಾದ ಅಚ್ಚರಿ ಹಾಗೂ ಹರ್ಷಗಳನ್ನು ಉಣಬಡಿಸಲು ಬದುಕು ಸದಾ ಕಾದಿರುತ್ತದೆ, ಅದಕ್ಕೆ ತೆರೆದುಕೊಳ್ಳುವ ಯಾರಿಗೇ ಆಗಲಿ, ಯಾವಾಗ ಬೇಕಾದರೂ ಆಗಲಿ.

ತಿಳಿಸಾರ

ವರ್ಷದಿಂದ ವರ್ಷಕ್ಕೆ ಜನರ ಆಯುರಾರೋಗ್ಯಕ್ಕೆ ಇರುವ ಕುತ್ತುಗಳು ಬದಲಾಗುವುದು ಸಾಮಾನ್ಯ. ಪ್ರಸಕ್ತ ವರ್ಷ ಜಾಗತಿಕ ಮಟ್ಟದಲ್ಲಿ ಕೆಳಗಿನ ಹತ್ತು ಸಮಸ್ಯೆಗಳು ಪ್ರಮುಖವಾಗಿ ತಲೆದೋರಿವೆ ಎಂದು ಸಮೀಕ್ಷೆಗಳು ತಿಳಿಸಿವೆ.


ವಿಶ್ವಾದ್ಯಂತ ಆರೋಗ್ಯಕ್ಕೆ ಇರುವ ಹತ್ತು ಕುತ್ತುಗಳು
ವಾಯುಮಾಲಿನ್ಯ ಹಾಗೂ ಹವಾಮಾನ ಬದಲಾವಣೆ
ಅಸಾಂಕ್ರಾಮಿಕ ರೋಗಗಳು
ಜಾಗತಿಕ ಇನ್‌ಫ್ಲುಯೆಂಜಾ ಪಿಡುಗು
ಬಹು ಬೇಗ ಸೋಂಕಿಗೆ ಪಕ್ಕಾಗುವ ವಾತಾವರಣ
ಡೆಂಘಿ ಜ್ವರ
ಎಚ್‌ಐವಿ ಸೋಂಕು
ಸೂಕ್ಷ್ಮಾಣು ಆಕ್ರಮಣಕ್ಕೆ ತಗ್ಗಿದ ಪ್ರತಿರೋಧ
ಜನರಲ್ಲಿ ಲಸಿಕೆಗಳಲ್ಲಿ ನಂಬಿಕೆ ಕಳೆದುಕೊಂಡಿರುವುದು
ದುರ್ಬಲ ಪ್ರಾಥಮಿಕ ಆರೋಗ್ಯ ರಕ್ಷಣೆ ವ್ಯವಸ್ಥೆ
ಎಬೋಲಾ ಮತ್ತಿತರ ಅತಿ ಮಾರಕ ವೈರಸ್‌ಗಳ ಹಾವಳಿ

ಕಾಕಾ ಹೋಟ್ಲು

ಸದಾನಂದ ಗೌಡ್ರ, ಗದ್ದಲಾ ನಿಲ್ತು, ಸೋಮಣ್ಣನವರದ್ದು ಯಾವಾಗ ಅಂತ ಎಲ್ಲ ಕಾಯ್ತವ್ರಂತೆ?

ಏಯ್, ಸುಖವಿಲ್ಲ ಬುಡು, ಚಂದ್ರ ಅಂತ ಹೆಸರಿಟ್ಟುಕೊಂಡು ಸೂರ್ಯನ ಥರ ಉರಿಯೋದೇ?

ಸುಡಾನ್ ಉಳಿಸಿಕೊಳ್ಳಲು ಕಟ್ಟಕಡೆಗೆ ಪಟ್ಟ ಕಾಳಜಿ, ಶ್ರಮವನ್ನು ಎಲ್ಲಾ ಪ್ರಾಣಿಗಳಿಗೂ ತೋರಿದರೆ, ಇನ್ನಷ್ಟು ವರ್ಷ ಅವುಗಳನ್ನಾದರೂ ಉಳಿಸಿಕೊಳ್ಳಲು ಸಾಧ್ಯ.

ಕಟ್ಟಕಡೆಯ ಆ ಗಂಡು ಘೇಂಡಾ ಮೃಗವೂ ಕಣ್ಮುಂದೇ ಕಣ್ಮರೆಯಾಯಿತು!

ನೂರೆಂಟು ವಿಶ್ವ

ವಿಶ್ವೇಶ್ವರ ಭಟ್
vbhat@me.com

ಇತ್ತೀಚೆಗೆ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ ಅವರ ಜತೆ ರಾತ್ರಿ ಊಟ ಮಾಡುತ್ತಾ ಒಂದಷ್ಟು ಲೋಕಾಭಿರಾಮವಾಗಿ ಮಾತಾಡುವ ಅವಕಾಶ ಸಿಕ್ಕಿತ್ತು. ರಾಜಕೀಯ, ದೈನಂದಿನ ವಿದ್ಯಮಾನ, ಮಂತ್ರಿ ಖಾತೆ ಈ ಎಲ್ಲಾ ವಿಷಯಗಳನ್ನು ಬದಿಗಿಟ್ಟು ಬೇರೆಯ ವಿಷಯಗಳತ್ತ ನಮ್ಮ ಮಾತುಕತೆ ಸಾಗಿತ್ತು. ಅವರು ಪ್ರತಿನಿಧಿಸುತ್ತಿರುವ ಮುಧೋಳ ಕ್ಷೇತ್ರದ ಆಚೆಗೂ ಪ್ರಸಿದ್ಧವಾಗಿರುವ, ದೇಶದೆಲ್ಲೆಡೆ ಅದರಲ್ಲೂ ವಿಶೇಷವಾಗಿ ಪೊಲೀಸ್ ಮತ್ತು ಮಿಲಿಟರಿಯಲ್ಲೂ ಲೋಕಪ್ರಿಯವಾಗಿರುವ ಮುಧೋಳ ನಾಯಿಯ ಬಗ್ಗೆಯೂ ನಮ್ಮ ಮಾತುಕತೆ ವಿಸ್ತರಿಸಿಕೊಂಡಿತು.

ಹೆಸರೇ ಸೂಚಿಸುವಂತೆ ಮುಧೋಳ ನಾಯಿಯ ನೈಜ ತಳಿ ಸಿಗುವುದು ಮುಧೋಳದಲ್ಲಿ ಮಾತ್ರ. ಅಲ್ಲಿ ವೈಜ್ಞಾನಿಕವಾಗಿ ತಳಿ ಸಂಕರ ನಡೆಯುತ್ತಿದೆ. ಸುಮಾರು ಆರು ನೂರು ಕುಟುಂಬಗಳು ಈ ತಳಿಯ ನಾಯಿಯನ್ನು ಕಾಪಾಡಿ, ಬೆಳೆಸಿ, ಅಭಿವೃದ್ಧಿಪಡಿಸಿ ಮಾರಾಟ ಮಾಡುವ ಕೆಲಸದಲ್ಲಿ ತೊಡಗಿದ್ದಾರೆ. ಈ ನಾಯಿ ತಳಿ ಸಂಶೋಧನೆ ಮತ್ತು ಅಭಿವೃದ್ಧಿಗೆ ಸರಕಾರ ಐದು ಕೋಟಿ ರುಪಾಯಿ ವೆಚ್ಚದಲ್ಲಿ ಒಂದು ಕೇಂದ್ರವನ್ನು ಸ್ಥಾಪಿಸಿದೆಯಂತೆ. ಇದರಿಂದ ಪಕ್ಕಾ ತಳಿಯನ್ನು ಸಂರಕ್ಷಿಸಿ, ಉಳಿಸಿಕೊಳ್ಳಲು ಮತ್ತು ಮುಂದುವರಿಸಿಕೊಂಡು ಹೋಗಲು ಸಾಧ್ಯವಾಗಿದೆ.

ಒಂದು ವೇಳೆ ಇದನ್ನು ಮಾಡದಿದ್ದರೆ, ಆ ಊರಿನಲ್ಲೊಂದೇ ಅಭಿವೃದ್ಧಿ ಪಡಿಸುತ್ತಿದ್ದಿದ್ದರೆ, ಬೆರಕೆ ಸಂಕರದಿಂದ (ಕ್ರಾಸ್ ಬ್ರೀಡಿಂಗ್) ಆ ತಳಿಯ ನಾಯಿಯ ಸ್ವರೂಪವೇ ಬದಲಾಗಿ ಹೋಗುತ್ತಿತ್ತು. ಒಂದು ವೇಳೆ ಆ ರೀತಿ ಆಗಿದ್ದಿದ್ದರೆ, ನಾವು ಇಂದು ನೋಡುವ ಮುಧೋಳ ನಾಯಿ, ಮೂಲ ಮುಧೋಳ ನಾಯಿ ಆಗಿರುತ್ತಿರಲಿಲ್ಲ. ಜಾತಿ ನಾಯಿಗೂ, ನಾಯಿ ಜಾತಿಗೂ ಬಹಳ ವ್ಯತ್ಯಾಸವಿದೆ. ಜಾತಿ ನಾಯಿಯನ್ನು ಮೂಲ ಸ್ವರೂಪದಲ್ಲಿ ಕಾಪಾಡುವುದು ಬಹಳ ಮುಖ್ಯ. ಇಲ್ಲದಿದ್ದರೆ ಕ್ರಾಸ್ ಬ್ರೀಡಿಂಗಿನಿಂದ ಅದರ ತಳಿ ವೈಶಿಷ್ಟ್ಯಗಳೇ ಹಾಳಾಗಿ ಹೋಗುತ್ತದೆ. ಇಂದು ಮುಧೋಳ ನಾಯಿ ತನ್ನ ಮೂಲ ಗುಣ, ಸ್ವರೂಪ, ಲಕ್ಷಣ, ಪ್ರಭೇದವನ್ನು ಉಳಿಕೊಂಡಿದ್ದರೆ ಅದಕ್ಕೆ ಈ ಕಾಳಜಿಯೇ ಕಾರಣ. ಒಂದು ಸಲ ಕ್ರಾಸ್ ಬ್ರೀಡಿಂಗ್ ಆದರೆ, ಮೂಲ ತಳಿಯಿಂದ ಪ್ರತ್ಯೇಕಗೊಂಡು ಅದರ ಗುಣ-ಲಕ್ಷಣಗಳೇ ಬದಲಾಗಿ ಹೋಗಬಹುದು. ಆಗ ಪುನಃ ಮೂಲ ತಳಿಯನ್ನು ಕಾಣುವುದು ಬಹಳ ಕಷ್ಟ. ಎಷ್ಟೆಂದರೂ ಮಿಶ್ರ ತಳಿ ಮಿಶ್ರತಳಿಯೇ.

ಆದರೆ ಮುಧೋಳ ನಾಯಿ ಇನ್ನು ನೂರಾರು ವರ್ಷ ಕಳೆದರೂ ತನ್ನ ಮೂಲ ತಳಿಯನ್ನು ಸಂರಕ್ಷಿಸಿಕೊಳ್ಳುವುದು ನಿಶ್ಚಿತ. ಮುಧೋಳದ 'ಶ್ವಾನ ಸಂಶೋಧನಾ ಮತ್ತು ಅಭಿವೃದ್ಧಿ ಕೇಂದ್ರ'ದಲ್ಲಿ ಒಂದೇ ತಂದೆ-ತಾಯಿಗೆ ಹುಟ್ಟಿದ ಮರಿಗಳು ದೊಡ್ಡದಾದ ನಂತರ, ಬೇರೆ ತಂದೆ-ತಾಯಿಗಳಿಂದ ಹುಟ್ಟಿದ ತಳಿಗಳಿಂದಲೇ ಸಂತಾನೋತ್ಪತ್ತಿ ಮಾಡುವಷ್ಟು ಎಚ್ಚರ ವಹಿಸಲಾಗುತ್ತಿದೆಯಂತೆ. ಅಷ್ಟರಮಟ್ಟಿಗೆ ಆ ನಾಯಿಯ 'ಒರಿಜಿನಲ್' ತಳಿಯನ್ನು ಸಂರಕ್ಷಿಸುವ ಪ್ರಯತ್ನ ನಡೆಯುತ್ತಿದೆ. ಒಂದು ವೇಳೆ ಈ ಕ್ರಮ ಕೈಗೊಳ್ಳದಿದ್ದರೆ, ಮುಧೋಳ ನಾಯಿಯ ಮೂಲಸ್ವರೂಪ ಎಂದೋ ಕೆಟ್ಟುಹೋಗುತ್ತಿತ್ತು. ನನಗೆ ಅಂದು ಕಾರಜೋಳ ಅವರ ಈ ಚಿಂತನೆ ಮತ್ತು ಕಳಕಳಿ ಬಗ್ಗೆ ಬಹಳ ಖುಷಿ ಆಯಿತು. ಇಲ್ಲದಿದ್ದರೆ ಇಡೀ ಜಗತ್ತಿನಲ್ಲಿಯೇ ಅಪರೂಪವಾಗಿರುವ ಮತ್ತು ಮುಧೋಳದಲ್ಲಿ ಮಾತ್ರ ಕಾಣಸಿಗುವ ಈ ಬೇಟೆ ನಾಯಿಯ ತಳಿಯೇ ನಿರ್ವಂಶವಾಗುತ್ತಿತ್ತು, ಇಲ್ಲವೇ ಮಿಶ್ರತಳಿಯಿಂದಾಗಿ ಅದರ ಸ್ವಂತಿಕೆಯೇ ಹೊರಟುಹೋಗುತ್ತಿತ್ತು.

ಮೊನ್ನೆ ನಾನು ಅಜರ್‌ಬೈಜಾನ್‌ಗೆ ಹೋದಾಗ, ಅಲ್ಲಿನ ವಿಶೇಷ ಜೇನುಹುಳುಗಳ ಬಗ್ಗೆ ಓದುತ್ತಿದ್ದೆ. ಅಲ್ಲಿನ ಸರಕಾರ ಪ್ರತಿ ವರ್ಷ ಜೇನುಹುಳುಗಳ ಬಗ್ಗೆ ಬಹಳ ಕಾಳಜಿ ತೆಗೆದುಕೊಂಡಿದೆ. ಜಗತ್ತಿನಲ್ಲಿ ಎಲ್ಲೂ ಸಿಗದ ಅಪರೂಪದ ಜೇನುಹುಳುಗಳು ಅಲ್ಲಿವೆಯಂತೆ. ಪ್ರತಿ ವರ್ಷ ಐದುನೂರಕ್ಕೂ ಹೆಚ್ಚು ಕೋಟಿ ರುಪಾಯಿ ಹಣ ಖರ್ಚು ಮಾಡಿ, ವಿವಿಧ ಹೂವುಗಳು ಮತ್ತು ಹಣ್ಣುಗಳು ಬಿಡುವ ಅರಣ್ಯವನ್ನು ಬೆಳೆಸುತ್ತಿದೆ. ಒಂದು ವೇಳೆ ಈ ಜೇನ್ನೊಣಗಳ ಸಂತತಿ ಕಣ್ಮರೆಯಾದರೆ ಇಡೀ ದೇಶದ ಕೃಷಿ ಮೇಲೆ ತೀವ್ರ ಪರಿಣಾಮ ಬೀರುವುದರಿಂದ ಅವುಗಳ ಸಂರಕ್ಷಣೆಗೆ ಸರಕಾರವೇ ಮುಂದಾಗಿದೆ.

ಕಳೆದ ಹತ್ತು ವರ್ಷಗಳಲ್ಲಿ ಮೂವತ್ತಕ್ಕೂ ವಿವಿಧ ಜಾತಿಯ ಜೇನ್ನೊಣಗಳು ಕಣ್ಮರೆಯಾದ ಬಳಿಕ, ಅಲ್ಲಿನ ಕೃಷಿ ಕ್ಷೇತ್ರದ ಮೇಲೆ ಪ್ರತಿಕೂಲ ಪರಿಣಾಮ ಬೀರಿದ ನಂತರ ಸರಕಾರ ಎಚ್ಚೆತ್ತುಕೊಂಡಿತು. ಜೇನ್ನೊಣಗಳಿಲ್ಲದೇ ಯಾವ ಕೃಷಿಯೂ ಸಾಧ್ಯವಿಲ್ಲ, ಕೃಷಿಗೆ ಮೂಲಾಧಾರವಾದ ಈ ಕೀಟಗಳನ್ನು ಉಪೇಕ್ಷಿಸಿದರೆ ಅದರಿಂದ ಬಲವಾದ ಏಟು ತಿನ್ನಬೇಕಾಗುತ್ತದೆ ಎಂದು ಅಲ್ಲಿನ ಸರಕಾರಕ್ಕೆ ಅನಿಸಿದ್ದರಿಂದ, ಈಗ ಜಗತ್ತಿನಲ್ಲಿರುವ ಉತ್ತಮ ತಳಿಗಳನ್ನು ತಂದು ಸಾಕುತ್ತಿದೆ. ಕೇವಲ ಮೂರು ವರ್ಷಗಳಲ್ಲಿ ಇದರ ಸಕಾರಾತ್ಮಕ ಪರಿಣಾಮ ಅಲ್ಲಿನ ಕೃಷಿ ಕ್ಷೇತ್ರದ ಮೇಲೆ ಕಾಣಿಸಿಕೊಂಡಿದೆ. ಈಗ ಅಲ್ಲಿನ ಸರಕಾರ ಮತ್ತೂ ಒಂದು ಹೆಜ್ಜೆ ಮುಂದೆ ಹೋಗಿ, ಮೂಲ ತಳಿ ಸಂರಕ್ಷಣೆಗೆ ಬೇಕಾದ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿದೆ. ಪರಿಸರದಲ್ಲಿ ಒಂದು ಜಾತಿಯ ಜೇನ್ನೊಣ ಕಣ್ಮರೆಯಾದರೂ ಅದರ ಪರಿಣಾಮ ಹಲವು ಬೆಳೆಗಳ ಮೇಲೆ ಆಗುತ್ತದೆ ಎಂಬ ಸರಳ, ಸಣ್ಣ ಸತ್ಯವನ್ನು ತಡವಾಗಿಯಾದರೂ ಕಂಡುಕೊಂಡಿದೆ. ಜೇನ್ನೊಣಗಳಿಲ್ಲದೇ ಯಾವ ಕೃಷಿಯೂ ಸಾಧ್ಯವಿಲ್ಲ ಎಂಬುದನ್ನು ಅರ್ಥ ಮಾಡಿಕೊಂಡಿದೆ.

ಇವೆಲ್ಲವುಗಳ ಪರಿಣಾಮವಾಗಿ, ಅಜರ್‌ಬೈಜಾನ್ ಜಗತ್ತಿನಲ್ಲಿಯೇ ಅತಿ ಮಧುರ, ಸಿಹಿಯಾದ ಜೇನುತುಪ್ಪವನ್ನು ತಯಾರಿಸುವ ದೇಶಗಳಲ್ಲಿ ಒಂದಾಗಿದೆ. ನಿಮ್ಮ ಊಟದ ತಾಟಿನಲ್ಲಿ ನೀವು ಸೇವಿಸುವ ಆಹಾರಗಳ ರುಚಿಯನ್ನು ನಿರ್ಧರಿಸುವುದು ಜೇನ್ನೊಣಗಳು ಅಂದ್ರೆ ನಿಮಗೆ ಆಶ್ಚರ್ಯವಾಗಬಹುದು. 'ಜೇನ್ನೊಣಗಳ ತಳಿ ಸಂರಕ್ಷಿಸದೇ ನಮ್ಮ ಬಾಯಿರುಚಿ ಕಾಪಾಡುವುದೂ ಸಾಧ್ಯವಿಲ್ಲ. ದುರ್ದೈವ, ಯಾರೂ ಈ ಬಗ್ಗೆ ಗಮನಹರಿಸುತ್ತಿಲ್ಲ' ಎಂದು ಅಲ್ಲಿನ ಜೇನುಹುಳು ತಜ್ಞ ಬರೆದಿದ್ದಾನೆ. ಜಗತ್ತಿನ ಯಾವುದೇ ದೇಶದಲ್ಲಿ ಜೇನ್ನೊಣಗಳ ಒಂದು ಜಾತಿ ನಾಶವಾಗಿ, ಲಕ್ಷಾಂತರ ಹುಳುಗಳು ಸತ್ತರೆ, ಅದರ ಪರಿಣಾಮ ಇಡೀ ಜಗತ್ತಿನ ಮೇಲಾಗುತ್ತದಂತೆ. ಒಂದು ಜೇನುಗೂಡಿನ ಒಟ್ಟಂದದಿಂದ ಅದು ಇರುವ ಹತ್ತಾರು ಕಿಮೀ ವ್ಯಾಪ್ತಿಯಲ್ಲಿರುವ ಪರಿಸರ ಹೇಗಿದೆ ಎಂಬುದನ್ನು ಹೇಳಬಹುದಂತೆ. ಅದು ತಯಾರಿಸುವ ಜೇನುತುಪ್ಪದಿಂದ ನೂರಾರು ಕಿಮೀ ದೂರದ ಪರಿಸರ, ವಾತಾವರಣ, ನೈಸರ್ಗಿಕ ಲಕ್ಷಣಗಳನ್ನು ನಿಖರವಾಗಿ ಹೇಳಬಹುದಂತೆ. ಆದರೆ ಪ್ರತಿದಿನ ಜಗತ್ತಿನಾದ್ಯಂತ ಕನಿಷ್ಠ ಹತ್ತಕ್ಕೂ ಹೆಚ್ಚಿನ ಜೇನ್ನೊಣಗಳ ವಿವಿಧ ತಳಿಗಳು ನಶಿಸುತ್ತಿವೆಯಂತೆ.

10.2019
NATIONAL GEOGRAPHIC
Last of Its Kind
WHAT WE LOSE WHEN AN ANIMAL GOES EXTINCT

ಆದರೆ ಯಾರೂ ಈ ಬಗ್ಗೆ ತಲೆಕೆಡಿಸಿಕೊಳ್ಳುತ್ತಿಲ್ಲ. ಒಂದು ಜೇನು ನೊಣ ಪ್ರಭೇದ ನಶಿಸಿ ಹೋದರೆ ಅದನ್ನು ಪುನಃ ಸೃಷ್ಟಿಸಲು ಸಾಧ್ಯವಿಲ್ಲವಂತೆ. ಅಂದರೆ ಒಂದು ತಳಿ ಕಣ್ಮರೆಯಾದರೆ ಅದು ಶಾಶ್ವತವಾಗಿ ಕಣ್ಮರೆ ಆದಂತೆಯೇ. ಒಂದು ಜೇನುಗೂಡು ನಾಶವಾದರೆ ಅದರಿಂದ ವಿಪರೀತ ಹಾನಿಯಾಗುತ್ತದೆ, ಅದರಲ್ಲೂ ಒಂದು ಪ್ರಭೇದ ನಶಿಸಿ ಹೋದರೆ ಅದರಿಂದ ಆಗುವ ಅನಾಹುತ ಅಷ್ಟಿಷ್ಟಲ್ಲ. ಅಷ್ಟಕ್ಕೂ ಒಂದು ಜೇನು ನೊಣ ಏನು ಮಾಡೀತು ಎಂದು ಉಪೇಕ್ಷೆ ಮಾಡುವಂತಿಲ್ಲ. ಹೂವಿಲ್ಲದ, ಹಣ್ಣಿಲ್ಲದ ಬರಡು ಭೂಮಿಯಲ್ಲಿ ಮಣ್ಣನ್ನು ಹೀರಿ ಜೇನ್ನೊಣಗಳು ಸಿಹಿಸಿಹಿ ಜೇನುತುಪ್ಪ ತಯಾರಿಸಬಲ್ಲವು. ಅವುಗಳಿಗೆ ಗೊತ್ತಿರುವುದು ಜೇನುತುಪ್ಪ ತಯಾರಿಸುವುದೊಂದೇ. ಆದರೆ ಅದು ಕಾರಣವಾಗುವ ಪರಾಗಸ್ಪರ್ಶ ಕ್ರಿಯೆಗಳಿಗೆ ಲೆಕ್ಕವಿಲ್ಲ. ಸುತ್ತಮುತ್ತಲಿನ ಪರಿಸರದಲ್ಲಿರುವ ಗಿಡಮರಗಳಲ್ಲಿ ನಿರಂತರವಾಗಿ ನಡೆಯುತ್ತಿರುವ ಈ ಕ್ರಿಯೆ ಮತ್ತು ಆ ಮೂಲಕ ನಡೆಯುವ ಸಮತೋಲನ ಪ್ರಕ್ರಿಯೆಯಲ್ಲಿ ಜೇನ್ನೊಣಗಳೇ ಅಗ್ರೇಸರರು. ಹೀಗಿರುವಾಗ ಒಂದು ಪ್ರಭೇದ ನಶಿಸಿ ಹೋದರೆ ನಮ್ಮ ಪರಿಸರದ ಮೇಲೆ ಇದರಿಂದ ಅದೆಂಥ ಕೆಟ್ಟ ಪರಿಣಾಮ ಉಂಟಾಗುತ್ತಿರಬಹುದು ಎಂದು ಊಹಿಸಬಹುದು.

ಅದು ಜೇನ್ನೊಣವಾಗಿರಬಹುದು, ರವಾಂಡಾ ಕಾಡಿನಲ್ಲಿರುವ ಮೌಂಟನ್ ಗೊರಿಲ್ಲಾ ಆಗಿರಬಹುದು, ಅಥವಾ ಐಸ್ಲೆಂಡ್ ದೇಶದ ಎಂಟು ನೂರು ವರ್ಷಗಳ ಅತ್ಯಂತ ಸಣ್ಣ ಗ್ಲೇಸಿಯರ್- 'ಒಕ್ಜೋಕುಲ್' ಇರಬಹುದು, ಇವೆಲ್ಲಾ ಅಪಾಯದ ಅಂಚಿನಲ್ಲಿವೆ ಅಂದರೆ ಯಾವುದೂ ಸರಿ ಇಲ್ಲ ಎಂದರ್ಥ. ಏನೋ ದೊಡ್ಡ ಅಪಾಯ ಕಾದಿದೆ ಎಂದರ್ಥ. ಈ ಬೃಹತ್ ಜೀವ ಸಂಕುಲದಲ್ಲಿ ಆನೆಯೂ ಒಂದೇ, ಜೇನ್ನೊಣಗಳೂ ಒಂದೇ. ಯಾವುದು ನಶಿಸಿ ಹೋದರೂ, ಅದರ ಪರಿಣಾಮ ಮಾತ್ರ ಅಗಾಧ. ಒಂದು ಜೇನ್ನೊಣ ಪ್ರಭೇದ ನಶಿಸಿದರೆ ಅದರಿಂದೇನಾದೀತು ಎಂಬ ಅಮಾಯಕ, ಉಡಾಫೆ ಅಥವಾ ಸೊಕ್ಕಿನ ಮನೋಭಾವವೇ ನಮ್ಮನ್ನು ಆಳುತ್ತಿರುವಾಗ ಅದರ ಪರಿಣಾಮವನ್ನು ಯಾರಿಗೆ ಹೇಳುವುದು?

ಇಂದು ರವಾಂಡಾದಲ್ಲಿ ಅಪರೂಪದ ಮಳೆಕಾಡುಗಳು ಉಳಿದುಕೊಂಡಿದ್ದರೆ, ಅದಕ್ಕೆ ಆ ಗೊರಿಲ್ಲಾಗಳೇ ಕಾರಣ. ಗೊರಿಲ್ಲಾಗಳ ಭಯದಿಂದ ಯಾರೂ ಅತ್ತ ಸುಳಿಯುತ್ತಿಲ್ಲ. ಒಂದು ವೇಳೆ ಸುಮಾರು ಐನೂರರಷ್ಟಿರುವ ಆ ಗೊರಿಲ್ಲಾಗಳೂ ನಶಿಸಿಹೋದರೆ, ಆ ಕಾಡುಗಳನ್ನು ದೇವರು ಬಂದರೂ ರಕ್ಷಿಸಲಾರ. ಹೀಗಾಗಿ ಆ ಗೊರಿಲ್ಲಾಗಳೂ ಇರಬೇಕು, ಆ ಕಾಡುಗಳೂ ಇರಬೇಕು. ಒಂದಿಲ್ಲದಿದ್ದರೆ ಮತ್ತೊಂದೂ ಇಲ್ಲ. ಒಂದಿದ್ದರೆ ಎರಡೂ ಇರುತ್ತವೆ. ಈ ಕಾರಣಗಳಿಗಾಗಿ ಪ್ರತಿ ಜೀವಿಯೂ ಇರಲೇಬೇಕು. ಒಂದು ಕಣ್ಮರೆಯಾದರೂ ಅದು ಪ್ರಕೃತಿಯ ಸಮತೋಲನದ ಮೇಲೆ ಪರಿಣಾಮ ಬೀರುತ್ತದೆ. ಗೊರಿಲ್ಲಾಗಳು ಇರುವುದರಿಂದಲೇ ಕಳ್ಳ ಸಾಗಣೆದಾರರು ಭಯದಿಂದ ಕಾಡಿನತ್ತ ಸುಳಿಯುತ್ತಿಲ್ಲ. ಆ ಕಾಡಿರುವುದರಿಂದಲೇ ಗೊರಿಲ್ಲಾಗಳೂ ಅಲ್ಲಿ ಕೊನೆ ಸಂತತಿಯಾಗಿ ಜೀವ ಹಿಡಿದುಕೊಂಡು ಬದುಕುಳಿದಿವೆ. ಎಂಟು ನೂರು ವರ್ಷಗಳ ಐಸ್ಲೆಂಡಿನ ಒಕ್ಜೋಕುಲ್ ಎಂಬ ಗ್ಲೇಸಿಯರ್ ಕಣ್ಮರೆಯಾದಾಗ ದೇಶವಾಸಿಗಳೆಲ್ಲ ಕಣ್ಣೀರು ಸುರಿಸಿ, ಶೋಕಾಚರಣೆ ಮಾಡಿದ್ದೂ ಇದೇ ಕಾರಣಕ್ಕೆ. ಗ್ಲೇಸಿಯರ್ ಕಣ್ಮರೆಯಾದರೆ ದೇಶವಾಸಿಗಳೆಲ್ಲ ಅಳಬೇಕೇಕೆ ಎಂಬ ಪ್ರಶ್ನೆಗೆ ಅವರ ಕಣ್ಣೀರಿನಲ್ಲಿಯೇ ಉತ್ತರವಿದೆ.

ಮೊನ್ನೆ ಜಾರ್ಜಿಯಾ ದೇಶದಿಂದ ಬರುವಾಗ ಕತಾರ್‌ನ ದೋಹಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಪುಸ್ತಕದ ಅಂಗಡಿಯೊಂದರಲ್ಲಿ ಈ ತಿಂಗಳ 'ನ್ಯಾಷನಲ್ ಜಿಯೋಗ್ರಾಫಿಕ್' ಮ್ಯಾಗಜಿನ್ ಕಣ್ಣಿಗೆ ಬಿತ್ತು. ಮುಖಪುಟದಲ್ಲಿ Last Of Its Kind: What We Lose When An Animal Goes Extinct ಎಂಬ ಲೇಖನ ಗಮನ ಸೆಳೆಯಿತು. ಸತ್ತ ಘೇಂಡಾ ಮೃಗವನ್ನು ಒಬ್ಬ ವ್ಯಕ್ತಿ ಅಪ್ಪಿ ಮುದ್ದಾಡುತ್ತಿರುವ ಚಿತ್ರವಿರುವ ಆ ಮುಖಪುಟವನ್ನು ನೋಡಿ ಅದನ್ನು ಖರೀದಿಸದೇ ಇರಲು, ತಕ್ಷಣ ಆ ಲೇಖನವನ್ನು ಓದದೇ ಇರಲು ಆಗಲಿಲ್ಲ. ಅಮೆರಿಕದ ಖ್ಯಾತ ಫೋಟೋಜರ್ನಲಿಸ್ಟ್ ಮತ್ತು ವನ್ಯಜೀವಿ ಹಕ್ಕುಗಳ ಹೋರಾಟಗಾರ್ತಿ ಅಮಿ ವಿಟಾಲೇ ಆ ಲೇಖನ ಬರೆದಿದ್ದಳು.

ಅದು ಅಳಿವಿನ ಅಂಚಿನಲ್ಲಿರುವ 'ನಾರ್ದರನ್ ವೈಟ್ ರೈನೋಸರಸ್'ನ ಕುರಿತಾದ ಲೇಖನ. ಇಡೀ ಜಗತ್ತಿನಲ್ಲಿ ಮೂರೇ ಮೂರು ನಾರ್ದರನ್ ವೈಟ್ ರೈನೋಸರಸ್ (ಬಿಳಿ ಮಿಶ್ರಿತ ಕಂದು ಬಣ್ಣದ ಘೇಂಡಾ ಮೃಗ) ಇವೆ. ಆ ಪೈಕಿ ಎರಡು ಹೆಣ್ಣು ಮತ್ತು ಒಂದೇ ಒಂದು ಗಂಡು. ಒಂದು ವೇಳೆ ಆ ಒಂದು ಗಂಡು ಘೇಂಡಾ ಮೃಗವೂ ಸತ್ತುಹೋದರೆ ಅಲ್ಲಿಗೆ ಆ ಸಂತತಿಯೇ ಈ ಭೂಮಿಯಿಂದ ನಶಿಸಿ ಹೋದಂತೆ. ಅಂದರೆ ಆ ಭಗವಂತ ಬಂದರೂ ಮತ್ತೆ ನಾರ್ದರನ್ ವೈಟ್ ಘೇಂಡಾ ಮೃಗವನ್ನು ಸೃಷ್ಟಿಸಲು ಸಾಧ್ಯವಿಲ್ಲ.

ಹೀಗಾಗಿ ಕಟ್ಟಕಡೆಯ ಗಂಡು ಘೇಂಡಾವನ್ನು ಇಷ್ಟು ವರ್ಷಗಳ ಕಾಲ ಬಹಳ ಜತನದಿಂದ, ಕಣ್ಣಲ್ಲಿ ಕಣ್ಣಿಟ್ಟು, ಎಲ್ಲಿಲ್ಲದ ರಕ್ಷಣೆ ಕೊಟ್ಟು ಝೆಕ್ ರಿಪಬ್ಲಿಕ್ ನಲ್ಲಿರುವ ಪ್ರಾಣಿ ಸಂಗ್ರಹಾಲಯದಲ್ಲಿ ನೋಡಿಕೊಂಡಿದ್ದರು. ಅಲ್ಲಿ ಇಟ್ಟರೆ ಪ್ರತಿದಿನ ಸಾವಿರಾರು ಜನರು ನೋಡಿ ಆ ಘೇಂಡಾ ಮೃಗಕ್ಕೆ ಆಯಾಸವಾಗಬಹುದು ಮತ್ತು ಆ ಕಟ್ಟಕಡೆಯ ಗಂಡು ಸಂತತಿಯನ್ನು ಅತಿ ಕಾಳಜಿಯಿಂದ ನೋಡಿಕೊಳ್ಳಬೇಕು ಎಂಬ ಕಾರಣದಿಂದ, ಅದನ್ನು ಸುಮಾರು ನಾಲ್ಕು ಸಾವಿರ ಕಿಮೀ ದೂರದಿಂದ ಕೀನ್ಯಾಕ್ಕೆ ವಿಮಾನದಲ್ಲಿ ಸಾಗಿಸಿದ್ದರು. ಹಾಗೆ ಸಾಗಿಸುವಾಗ ದೊಡ್ಡ ಪಂಜರವನ್ನು ನಿರ್ಮಿಸಲಾಗಿತ್ತು. ಆ ಪಂಜರದೊಳಗೆ ಓಡಾಡುವಷ್ಟು ಜಾಗವನ್ನು ಮಾಡಿಕೊಡಲಾಗಿತ್ತು. ಕೀನ್ಯಾದಲ್ಲಿ ಅದೊಂದರ ಆರೈಕೆಗೆ ನಾಲ್ವರು ಪಶು ವೈದ್ಯರು ಮತ್ತು ಹನ್ನೆರಡು ನುರಿತ ಆಳುಗಳನ್ನು ದಿನದ ಇಪ್ಪತ್ನಾಲ್ಕು ಗಂಟೆಗಳ ಕಾಲ ನಿಗಾ ಇಡಲು ನೇಮಿಸಲಾಗಿತ್ತು.

ಅಂದಹಾಗೆ ಈ ಘೇಂಡಾ ಮೃಗದ ಹೆಸರು 'ಸುಡಾನ್' ಅಂತ. ಏನೇ ಆದರೂ ಈ ಮೃಗವನ್ನು ಉಳಿಸಿಕೊಳ್ಳಲೇಬೇಕೆಂದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಒತ್ತಡಗಳೂ ಬಂದಿದ್ದವು. ಸುಡಾನ್ ಉಳಿಸಲು ಜಗತ್ತಿನೆಲ್ಲೆಡೆಗಳಿಂದ ಹಣದ ನೆರವು ಹರಿದು ಬಂದಿತ್ತು. ಕೀನ್ಯಾ ಸರಕಾರ ಅದಕ್ಕಾಗಿ ಯಾವ ಕ್ರಮಕ್ಕೂ ಸಜ್ಜಾಗಿತ್ತು. ಸುಡಾನ್ ಕುರಿತು ದೈನಂದಿನ ಬುಲೆಟಿನ್ ಪ್ರಕಟ ಮಾಡಲಾಗುತ್ತಿತ್ತು. ಕೀನ್ಯಾದ ಓಲ್ ಪೇಜೆತಾ ಎಂಬ ಪ್ರತಿಷ್ಠಿತ ವನ್ಯಧಾಮದಲ್ಲಿ ಸುಡಾನ್‌ಗೆ ವಸತಿ ನಿರ್ಮಿಸಿಕೊಡಲಾಯಿತು. ಅಕ್ಷರಶಃ ಒಬ್ಬ ರಾಜನಿಗೆ ಸಿಗಬಹುದಾದ ಎಲ್ಲಾ ಮರ್ಯಾದೆ, ಸೌಕರ್ಯ, ಸವಲತ್ತುಗಳನ್ನೆಲ್ಲ ಆ ಘೇಂಡಾಕ್ಕೆ ಒದಗಿಸಿಕೊಡಲಾಗಿತ್ತು. ಸುಡಾನ್ ಉಳಿಸಿಕೊಳ್ಳಲು ಕೆಲವು ಪ್ರಾಣಿಪ್ರಿಯರು ತಮ್ಮ ಆಸ್ತಿ-ಪಾಸ್ತಿ ಬರೆದುಕೊಟ್ಟಿದ್ದರು. ನೂರಾರು ವನ್ಯಜೀವಿ ಸಂಘಟನೆಗಳು ಸುಡಾನ್ ನೆರವಿಗೆ ಧಾವಿಸಿದವು. ಕೆಟ್ಟ ಮೇಲೆ ಬುದ್ಧಿ ಬಂದಿತ್ತು. ಸುಮಾರು ನೂರು ವರ್ಷಗಳ ಹಿಂದೆ ಆಫ್ರಿಕಾದಲ್ಲಿ ಲಕ್ಷಾಂತರ ಘೇಂಡಾ ಮೃಗಗಳಿದ್ದವು. 1980 ರ ಸುಮಾರಿಗೆ ಅಂದರೆ ಸುಮಾರು ನಲವತ್ತು ವರ್ಷಗಳ ಹಿಂದೆ ಅವುಗಳ ಸಂಖ್ಯೆ ಹತ್ತೊಂಬತ್ತು ಸಾವಿರಕ್ಕೆ ಇಳಿದಿತ್ತು. ಈ ಪ್ರಾಣಿಯ ಅಂಗಾಂಗಗಳೇ ಅದರ ಉಳಿವಿಗೆ ಕುತ್ತಾಗಿ ಪರಿಣಮಿಸಿತ್ತು. ಇದರ ಕೋಡು, ಉಗುರುಗಳನ್ನು ಹಾಲಿನಲ್ಲೋ, ನೀರಿನಲ್ಲೋ ತೇಯ್ದು ನೆಕ್ಕಿದರೆ ಜ್ವರ, ಹೊಟ್ಟೆನೋವು ವಾಸಿಯಾಗುವುದಂತೆ, ಹಾವು ಕಡಿದರೆ ಅದರ ಕೋಡನ್ನು ಬೇಯಿಸಿ ಕುಡಿದರೆ ರಾಮಬಾಣವಂತೆ, ಮಕ್ಕಳಾಗದಿದ್ದರೆ ಘೇಂಡಾದ ಕೋಡನ್ನು ಹಾಲಿನಲ್ಲಿ ತೇಯ್ದು ಕುಡಿದರೆ ನಪುಂಸಕತ್ವ ಮಾಯವಾಗುವುದಂತೆ, ಜಠರದ ಸಮಸ್ಯೆಗೂ ಇದೇ ಮದ್ದಂತೆ, ಇದರ ಚರ್ಮದಿಂದ ಅದನ್ನು ತಯಾರಿಸಬಹುದಂತೆ, ಇದನ್ನು ಮಾಡಬಹುದಂತೆ...ಎಂಬ ನಾಟಿ ವೈದ್ಯರ ಮತ್ತು ವನ್ಯಪ್ರಾಣಿ ದಲ್ಲಾಳಿಗಳ ಮಾತು ಕೇಳಿ ಈ ಮೂಕ ದಢೂತಿ ಪ್ರಾಣಿ ಕಣ್ಣಾ ಕಣ್ಣೆದುರಲ್ಲೇ ನಾಶವಾಗುತ್ತಾ ನಾಶವಾಗುತ್ತಾ, ಕಟ್ಟಾಕಡೆಗೆ ಒಂದು ಒಂದು ಗಂಡು ಘೇಂಡಾ ಉಳಿದುಕೊಂಡಿತು,ಆಗ ಮನುಷ್ಯ ಎಚ್ಚೆತ್ತುಕೊಂಡ!

ಸುಡಾನ್ ಝೆಕ್ ರಿಪಬ್ಲಿಕ್‌ನಿಂದ ಕೀನ್ಯಾದ ವನ್ಯಧಾಮಕ್ಕೆ ಬಂದು ಒಂಬತ್ತು ವರ್ಷಗಳ ಕಾಲ ರಾಜಾತಿಥ್ಯವನ್ನು ಅನುಭವಿಸಿತು. ಅದನ್ನು The most eligible bachelor in the world ಎಂದು ಎಲ್ಲರೂ ತಮಾಷೆ ಮಾಡುತ್ತಿದ್ದರು. ಅದು ಕೀನ್ಯಾದ ವಾತಾವರಣಕ್ಕೆ ಹೊಂದಿಕೊಳ್ಳಲು ಬಹಳ ಪ್ರಯಾಸಪಟ್ಟಿತು. ಝೆಕ್ ರಿಪಬ್ಲಿಕ್‌ನಲ್ಲಿದ್ದ ವಾತಾವರಣವನ್ನೇ ಪುನರ್ ಸೃಷ್ಟಿಸಲಾಗಿತ್ತು. ಆದರೆ ವಯಸ್ಸೆಂಬುದು ಅದರ ಪರವಾಗಿ ಇರಲಿಲ್ಲ. ಅದಕ್ಕೆ ನಲವತ್ತೈದು ವರ್ಷಗಳಾಗಿದ್ದವು. ಸುಡಾನ್ ಹೆಸರು ಹೇಳಿದರೆ ಕೋಟಿ ಕೋಟಿ ಡಾಲರೇನೋ ಹರಿದುಬರುತ್ತಿತ್ತು. ಆದರೆ ಆಯಸ್ಸನ್ನು ಹಣದಿಂದ ಖರೀದಿಸುವುದು ಸಾಧ್ಯವಿಲ್ಲವಲ್ಲ? ಸುಡಾನ್ ಆರೋಗ್ಯ ಸರಿ ಇಲ್ಲ ಎಂದು ಅದನ್ನು ನೋಡಿಕೊಳ್ಳುತ್ತಿದ್ದ ವೈದ್ಯರು ಹೇಳಿದಾಗ, ಜಗತ್ತಿನೆಲ್ಲೆಡೆ ಪ್ರವಾಹೋಪಾದಿಯಲ್ಲಿ ಸಂದೇಶಗಳು ಹರಿದುಬಂದವು. ಅದೆಷ್ಟೇ ಖರ್ಚಾಗಲಿ, ನಾವು ಅದನ್ನು ಭರಿಸುತ್ತೇವೆ, ಹೇಗಾದರೂ ಮಾಡಿ ಸುಡಾನ್‌ನನ್ನು ಉಳಿಸಿ ಎಂದು ಸಾವಿರಾರು ಜನ ಚೆಕ್ ಬುಕ್ ಹಿಡಿದು ಅದು ಇರುವ ವನ್ಯಧಾಮಕ್ಕೆ ಧಾವಿಸಿ ಬಂದರು.

ಆದರೆ ಕಾಲ ಮಿಂಚಿ ಹೋಗಿತ್ತು. ಯಾರೂ ಏನೂ ಮಾಡುವ ಸ್ಥಿತಿಯಲ್ಲಿ ಇರಲಿಲ್ಲ. ಅದು ಹಿಂದಿನ ವರ್ಷದ ಮಾರ್ಚ್ 19 ರಂದು ಈ ಭೂಮಿಯಿಂದ ತನ್ನ ಸಂತತಿಯನ್ನೇ ಕಟ್ಟಿಕೊಂಡು ನಿರ್ಗಮಿಸಿಬಿಟ್ಟಿತು! ಇನ್ನು ಯಾರು ಏನೇ ಮಾಡಿದರೂ ಆ ಸಂತತಿಯ ಘೇಂಡಾ ಮೃಗವನ್ನು ಭೂಮಿಯ ಮೇಲೆ ಕಾಣಲು ಸಾಧ್ಯವಿಲ್ಲ!

ಈಗ ಎರಡೇ ಎರಡು ಹೆಣ್ಣು ಘೇಂಡಾ ಮೃಗಗಳು ಮಾತ್ರ ಉಳಿದುಕೊಂಡಿವೆ. ವಿಜ್ಞಾನಿಗಳು ಕೃತಕ ಗರ್ಭಧಾರಣೆ ವಿಧಾನದ ಮೂಲಕ ಆ ಪ್ರಾಣಿಯನ್ನು ಸೃಷ್ಟಿಸಬಹುದು. ಅದು ಕೃತಕ ಘೇಂಡಾ ಮೃಗವಾದೀತೇ ಹೊರತು ನಿಸರ್ಗ ಸಹಜ ಘೇಂಡಾ ಆಗಲು ಸಾಧ್ಯವೇ ಇಲ್ಲ. ಆ ಅಪರೂಪದ ಬಿಳಿ ಮಿಶ್ರಿತ ಕಂದು ಬಣ್ಣದ ಘೇಂಡಾ, ಮನುಷ್ಯನ ಹಪಾಹಪಿಗೆ ಈ ಜಗತ್ತಿನಿಂದ ಮರೆಯಾಯಿತು . ಮನುಷ್ಯನ ದುರಾಸೆ, ನಿಷ್ಕಾಳಜಿ, ತಾತ್ಸಾರ, ಅವಜ್ಞೆ ಮತ್ತು ಮೂರ್ಖತನಕ್ಕೆ ಒಂದು ಅಪರೂಪದ ಪ್ರಾಣಿ ಸಂತತಿಯೇ ಈ ಪ್ರಪಂಚದಿಂದ ನಮ್ಮ ಕಣ್ಣೆದುರಲ್ಲೇ ನಶಿಸಿ ಹೋಯಿತು. ಇನ್ನು ಮೂರು ಲೋಕ ಒಂದು ಮಾಡಿದರೂ ಅದನ್ನು ಪುನಃ ಸೃಷ್ಟಿಸಲು ಸಾಧ್ಯವಿಲ್ಲ.

ಇದು ಕೇವಲ ಘೇಂಡಾ ಮೃಗದ್ದೊಂದೇ ಕಥೆಯಲ್ಲ. ಹಲವು ಪ್ರಾಣಿ ಸಂಕುಲಗಳ ಸುಡಾನ್‌ಗಳು ನಮ್ಮ ಮುಂದೆಯೇ ದಿನಗಳನ್ನು ದೂಡುತ್ತಿವೆ. ನಾವು ಇನ್ನಾದರೂ ಎಚ್ಚೆತ್ತುಕೊಳ್ಳದಿದ್ದರೆ ಸುಡಾನ್ ಬೀಳ್ಕೊಟ್ಟ ಹಾಗೆ ಅನೇಕ ಪ್ರಾಣಿಗಳಿಗೂ ವಿದಾಯ ಹೇಳುವ ದಿನಗಳು ದೂರವಿಲ್ಲ. ಕಟ್ಟಕಡೆಗೆ ಸುಡಾನ್ ಉಳಿಸಿಕೊಳ್ಳಲು ಪಟ್ಟ ಕಾಳಜಿ, ಶ್ರಮವನ್ನು ಎಲ್ಲಾ ಪ್ರಾಣಿಗಳಿಗೂ ತೋರಿದರೆ, ಇನ್ನಷ್ಟು ವರ್ಷ ಅವುಗಳನ್ನಾದರೂ ಉಳಿಸಿಕೊಳ್ಳಲು ಸಾಧ್ಯ.

ನಾವೇಕೆ ವನ್ಯಪ್ರಾಣಿಗಳನ್ನು ಸಂರಕ್ಷಿಸಬೇಕು ಎಂಬ ಪ್ರಶ್ನೆ ಬಂದಾಗ ಸುಡಾನ್ ನೆನಪಾಗುತ್ತಾನೆ!

ಸಂಶೋಧನೆ ಅಂದ್ರೆ ತೊಂಬತ್ತರ ಹೊಸ್ತಿಲಲ್ಲೂ ಚಿಮೂಗೆ ಹುರುಪು!

ಪರಂಪರೆ

ದೇವಿ ಮಹೇಶ್ವರ ಹಂಪಿನಾಯ್ಡು
hampiexpress1336_1509@yahoo.com

ಮೊನ್ನೆಯಷ್ಟೇ ವಿಶ್ವವಿಖ್ಯಾತ ಮೈಸೂರಿನ ನವರಾತ್ರಿ ದಸರಾ ಅಂಬಾರಿ ಉತ್ಸವ ವಿಜೃಂಭಣೆಯಿಂದ ಜರುಗಿತು. ಆದರೆ ಈ ಜಗದ್ವಿಖ್ಯಾತ ಉತ್ಸವಕ್ಕೆ ಚಾಲನೆ ದೊರಕಿದ್ದು ಸನಾತನ ಪರಂಪರೆಯ ಹಿಂದೂ ಧರ್ಮದ ಹೃದಯವೆನಿಸಿದ್ದ ವಿಜಯನಗರ ಸಾಮ್ರಾಜ್ಯದಲ್ಲಿ ಎಂಬುದು ಸಾಕಷ್ಟು ಮಂದಿಗೆ ತಿಳಿದೇ ಇಲ್ಲ. ಮತ್ತೂ ಹೇಳಬೇಕೆಂದರೆ ಇಂತಹ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಉತ್ಸವ ಹುಟ್ಟುಪಡೆದದ್ದು ವಿಜಯನಗರ ಸಾಮ್ರಾಜ್ಯ ಪೂರ್ವದಲ್ಲಿ ಎಂಬ ವಿಚಾರ ಮತ್ತಷ್ಟು ಸೋಜಿಗ. ಇದರ ಖಚಿತವಾದ ಪುರಾವೆಗಳಿಗಾಗಿ ಕಳೆದ ವಾರ ತುಂಗಭದ್ರ ತೀರದ ಹಂಪಿ ಮತ್ತು ಗಂಗಾವತಿಗೆ ಚಿಮೂ ಜತೆ ಸಹಾಯ ಕನಾಗಿ ತೆರಳುವ ಅವಕಾಶ ನನಗೆ ದಕ್ಕಿತು.

ಪ್ರಾಥಮಿಕವಾಗಿ ತಿಳಿದಿರುವ ಇತಿಹಾಸದಂತೆ ವಿಜಯನಗರ ಸಾಮ್ರಾಜ್ಯ ಉದಯಿಸಿದ್ದು ಶೃಂಗೇರಿ ಶಂಕರಾಚಾರ್ಯರ ಮಠದಲ್ಲಿ ಸಂನ್ಯಾಸಿಯಾಗಿದ್ದ ವಿದ್ಯಾರಣ್ಯರ ಪೌರೋಹಿತ್ಯದಲ್ಲಿ ಸಂಗಮವಂಶದ ಐವರು ಗಂಡು ಮಕ್ಕಳಲ್ಲಿ ಮೊದಲಿಗರಾದ ಹರಿಹರ ಮತ್ತು ಬುಕ್ಕರಾಯ ಸಹೋದರರಿಂದ ಎಂಬುದು ಸ್ಪಷ್ಟ. ಇದನ್ನು ಬಾಗೇಪಲ್ಲಿಯ ಬೆಸ್ತರಹಳ್ಳಿ ಶಾಸನ ಹಾಗೂ ಆಂಧ್ರಪ್ರದೇಶದ ನೆಲ್ಲೂರಿನ ಕಾಪಲೂರು ಶಾಸನ ಸ್ಪಷ್ಟಪಡಿಸಿವೆ. ಆದರೆ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಕುರಿತು ಇರುವಷ್ಟು ಗೊಂದಲ ಬೇರೆ ಯಾವ ಸಾಮ್ರಾಜ್ಯದ ವಿಷಯದಲ್ಲೂ ಇಲ್ಲ. ಇದಕ್ಕೆ ಕಾರಣ ಅನೇಕ ವಿದ್ವಾಂಸರು, ನಕಲಿ ಸಂಶೋಧಕರು, ಎಡವಾದಿ ಇತಿಹಾಸಕಾರರು ತಮ್ಮಿಷ್ಟಕ್ಕೆ ಬಂದಂತೆ ಇತಿಹಾಸ ವನ್ನು ತಿರುಚಿ ಸಾಮ್ರಾಜ್ಯದ ಸ್ಥಾಪನೆಯ ಲಾಭವನ್ನು ಜಾತೀಯತೆಯ ಬಲೆಯೊಳಗೆ ಸಿಲುಕಿಸಿದ್ದಾರೆ. ಇದರ ಪರಿಣಾಮವಾಗಿ ಹಕ್ಕಬುಕ್ಕರು ಬೇಡ ಸಮುದಾಯದವರೆಂದು ನಾಯಕ ಜನಾಂಗದವರು ಆರಾಧಿಸಿದರೆ, ಮತ್ತೊಂದೆಡೆ ಕುರುಬರು ಎಂಬ ಊಹೆಯಲ್ಲಿ ಕುರುಬ ಸಮಾಜದವರು ಬರಿಯ ಜಾತಿಕಾರಣಕ್ಕೆ ಹಕ್ಕಬುಕ್ಕ ಹೆಸರಿನಲ್ಲಿ ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡು ಸಮಾಧಾನಪಟ್ಟಿದ್ದಾರೆ. ಸತ್ಯಾಂಶವೆಂದರೆ ಯಾವುದೇ ಶಾಸನಗಳಲ್ಲಿಯೂ ಅವರ ಜಾತಿ ಉಲ್ಲೇಖವಿಲ್ಲ. ಹಾಗೆಯೇ ವಿದ್ಯಾರಣ್ಯರ ಕುರಿತು ಇದ್ದ ಗೊಂದಲ ನಿವಾರಿಸುವ ತಾಕತ್ತು ಇರುವ ಶಾಸನವೊಂದನ್ನು ಹದಿನೆಂಟು ವರ್ಷಗಳ ಹಿಂದೆ ಕನ್ನಡ ವಿಶ್ವವಿದ್ಯಾಲಯದಲ್ಲಿ ಶಾಸನಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿದ್ದ ಕ್ರಿಯಾಶೀಲ, ವಸ್ತುನಿಷ್ಠ ಸಂಶೋಧಕರಾದ ಡಾ.ಡಿ.ವಿ. ಪರಮಶಿವಮೂರ್ತಿಯವರು ಬೆಳಕಿಗೆ ತಂದರು. ಅದು ಒಂದನೇ ಹರಿಹರರಾಯನ ಹಾಲ್ಕಾವಟಗಿಯ ಏಳು ಪ್ರತ್ಯೇಕ ತಾಮ್ರಪಟಗಳಿಂದ ಕೂಡಿದ ಕೂಟಶಾಸನ. ಈ ಶಾಸನದಲ್ಲಿ ವಿದ್ಯಾರಣ್ಯರ ಅಸ್ತಿತ್ವ ಹಾಗೂ ಅವರ ವೈಚಾರಿಕತೆಯನ್ನು ವರ್ಣಿಸಲಾಗಿದೆ. ಅವರಿಗೂ ಶೃಂಗೇರಿ ಮಠಕ್ಕೂ ಇದ್ದ ಸಂಬಂಧಗಳನ್ನು ದೃಢಪಡಿಸುತ್ತದೆ. ಒಟ್ಟಾರೆಯಾಗಿ ಈ ಶಾಸನವು ವಿಜಯನಗರ ಸಾಮ್ರಾಜ್ಯದಲ್ಲಿದ್ದ ವಿದ್ಯಾರಣ್ಯ-ಹರಿಹರರಾಯ-ಬುಕ್ಕರಾಯರ ಸಂವೇದನೆಯನ್ನು ಸಾಕ್ಷೀಕರಿಸುತ್ತದೆ.

ದಾಂಡೇಲಿಯ ಪುರೋಹಿತ ಮನೆತನದವರಾದ ದತ್ತಾತ್ರೇಯ ಪುರೋಹಿತ್ ಅವರ ಪುರಾತನ ವಂಶಸ್ಥರ ಈ ಶಾಸನದಲ್ಲಿ ವಿಜಯನಗರ ಸಾಮ್ರಾಜ್ಯವು ಶಾಲಿವಾಹನ ಶಕ 1258ರ ಧಾತೃನಾಮ ಸಂವತ್ಸರದ ವೈಶಾಖಮಾಸದ ಸಪ್ತಮಿ ತಿಥಿಯಂದು, ಅಂದರೆ 1336 ಏಪ್ರಿಲ್ 18ರಂತೆ ಸ್ಥಾಪನೆಯಾಗಿರುವುದಾಗಿ ದೃಢಪಡಿಸುತ್ತದೆ. ಈ ಶಾಸನವನ್ನು ಒಂದು ವರ್ಷದ ಕಾಲ ಎಲ್ಲಾ ದೃಷ್ಟಿಕೋನಗಳಿಂದಲೂ ಪರೀಕ್ಷಿಸಿ ಹಲವಾರು ವಿದ್ವಾಂಸರುಗಳೊಂದಿಗೆ ಚರ್ಚಿಸಿ ಹಂಪಿ ವಿಶ್ವವಿದ್ಯಾಲಯದ ವಿಚಾರಸಂಕೀರ್ಣದಲ್ಲಿ ಮಂಡಿಸಿ, ಹಂಪಿ ಉತ್ಸವ ಮತ್ತು ಮೈಸೂರಿನ ಆಲ್ ಇಂಡಿಯಾ ಎಪಿಗ್ರಾಫಿಕಲ್ ಸೊಸೈಟಿ ಕಾನ್ಫರೆನ್ಸ್ ನಲ್ಲೂ ಪ್ರದರ್ಶಿಸಿ ಸಾಮ್ರಾಜ್ಯ ಸ್ಥಾಪನೆಯಲ್ಲಿನ ಗೊಂದಲವನ್ನು ಡಾ ಪರಮಶಿವಮೂರ್ತಿಗಳು ನಿವಾರಿಸಿದ್ದಾರೆ. ದುರಂತವೆಂದರೆ ಈಗಲೂ ಕೆಲ ಅರೆಬೆಂದ ಪ್ರೊಫೆಸರ್‌ಗಳು, ಸತ್ಯ ಇತಿಹಾಸವನ್ನು ಒಪ್ಪಿಕೊಳ್ಳುವ ಮನಸ್ಸಿಲ್ಲದ ಡಾಕ್ಟರೇಟ್ ಜೀವಿಗಳು ಆಳವಾದ ಅಧ್ಯಯನಗಳಿಲ್ಲದೆ ಸಾಮ್ರಾಜ್ಯ ಸ್ಥಾಪನೆಯ ಕಾಲಮಾನವಾದ 1336ರನ್ನೇ ಅಳಿಸಿಹಾಕುವ ಪ್ರಯತ್ನದಲ್ಲಿದ್ದಾರೆ. ಇದೇ ವಿಚಾರವಾಗಿ ಡಾ.ಚಿದಾನಂದಮೂರ್ತಿಗಳು ವಿಜಯನಗರ ಸಾಮ್ರಾಜ್ಯದ ಪೂರ್ವದಲ್ಲಿದ್ದ ಗಂಡುಗಲಿ ಕುಮಾರರಾಮ ಬೆನ್ನತ್ತಿದ್ದಾರೆ. ಮೊನ್ನೆ ಅವರ ಪ್ರವಾಸದಲ್ಲಿ ಕುಮಾರರಾಮನ ವಂಶ ಸ್ಥರೆಂದು ಗುರುತಿಸಿಕೊಂಡಿರುವ ಗಂಗಾವತಿಯ ರಾಜೇಶನಾಯಕ ಎಂಬ ವ್ಯಕ್ತಿಯ ಪರಿಚಯವಾಯಿತು. ಅವರ ಮೂಲಕ ಕುಮಾರರಾಮನ ಕುಮ್ಮಟದುರ್ಗ ಎಂಬ ದುರ್ಗಮ ಪ್ರಾಕೃತಿಕ ಪ್ರದೇಶ ತಲುಪಿ ಕುಮಾರರಾಮನ ಕೋಟೆ ಹೆಬ್ಬಾಗಿಲನ್ನು ಬಹಳ ಶ್ರಮದಿಂದ ಹತ್ತಿರದಿಂದ ನೋಡಿ ಬಂದಿದ್ದಾರೆ ಚಿದಾನಂದಮೂರ್ತಿಗಳು. ಹಕ್ಕಬುಕ್ಕರು ಕುಮಾರರಾಮನ ಅಕ್ಕನ ಮಕ್ಕಳು. ಅಂದರೆ ಅಳಿಯಂದಿರು ಎಂಬುದು ಐತಿಹಾಸಿಕ ವಿಷಯವಾಗಿದೆ. ಆದರೆ ವಿಜಯನಗರ ಸ್ಥಾಪನೆಯ 1336ರ ನಂತರ ಲಭ್ಯವಿರುವ ಶಾಸನಗಳಷ್ಟು ಐತಿಹ್ಯ-ದಾಖಲೆಗಳು ಕುಮಾರರಾಮನ ಕುರಿತು ವಿರಳವಾಗಿ ದೊರಕುತ್ತದೆ.

ಲಭ್ಯವಿರುವ ಇತಿಹಾಸದ ಪ್ರಕಾರ, ಗಂಗಾವತಿ ತಾಲ್ಲೂಕಿನ ಕುಮ್ಮಟದುರ್ಗ 13ನೇ ಶತಮಾನದಲ್ಲಿ ಮುಮ್ಮಡಿ ಸಿಂಗೇನಾಯಕ ಎಂಬ ಬೇಡದೊರೆಯ ಆಳ್ವಿಕೆಗೆ ಒಳಪಟ್ಟಿತ್ತು. ಈ ದೊರೆಗಳೇ ಉತ್ತರದ ಮುಸ್ಲಿಂ ಆಕ್ರಮಣಕಾರರನ್ನು ನಿಯಂತ್ರಿಸಿ ಕುಮ್ಮಟದುರ್ಗವನ್ನು ಕೇಂದ್ರವಾಗಿಸಿಕೊಂಡು ಸಾಮ್ರಾಜ್ಯವನ್ನು ವಿಸ್ತರಿಸಿ ದಕ್ಷಿಣದಲ್ಲಿ ಹಿಂದೂ ಧರ್ಮವನ್ನು ರಕ್ಷಿಸಿದ ಕೀರ್ತಿಯನ್ನು ಹೊಂದಿದ್ದರು. ಮುಮ್ಮಡಿ ಸಿಂಗೇನಾಯಕನ ಶೌರ್ಯದ ಗೌರವಾರ್ಥ ಮಹಾರಾಷ್ಟ್ರದ ದೇವಗಿರಿಯ ರಾಜ 750 ಕೆಜಿ ತೂಕದ ರತ್ನ ಖಚಿತ ಬಂಗಾರದ ಅಂಬಾರಿಯನ್ನು ನಾಯಕನಿಗೆ ನೀಡಿದ ಎಂಬ ನಂಬಿಕೆ ಇದೆ. ಅದೇ ಅಂಬಾರಿಯನ್ನು ಕುಮ್ಮಟದುರ್ಗದ ದುರ್ಗಾದೇವಿಯ ಉತ್ಸವದಲ್ಲಿ ಬಳಸಿ ನವರಾತ್ರಿ ಮತ್ತು ದಸರಾ ಉತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿತ್ತು ಎಂಬ ಪ್ರತೀತಿ ಈಗಲೂ ಸಾಗಿಬಂದಿದೆ. ತದನಂತರ ಯುದ್ಧದಲ್ಲಿ ಸುಲ್ತಾನರ ಮೋಸ ಕುತಂತ್ರದಿಂದ ಕುಮಾರರಾಮನಿಗೆ ಸೋಲುಂಟಾಗಿ ಆತ ತನ್ನ ಅಳಿಯಂದಿರಾದ ಹಕ್ಕಬುಕ್ಕರಿಗೆ ಸಾಮ್ರಾಜ್ಯವನ್ನು ಉಳಿಸಿಕೊಳ್ಳುವುದಕ್ಕೆ ಆದೇಶಿಸುತ್ತಾನೆ. ಹೀಗೆ ಹರಿಹರಬುಕ್ಕರು ಆನೆಗುಂದಿ ಪ್ರವೇಶಿಸಿ ಬರುವಾಗ ಕಾಡುನಾಯಿಯನ್ನು ಮೊಲವೊಂದು ಬೇಟೆಯಾಡುವ ಅಪರೂಪದ ದೃಶ್ಯವನ್ನು ಕಾಣುತ್ತಾರೆ. ಇದನ್ನು ನೋಡಿ ಬೆರಗಾದ ಸಹೋದರರು ಹಂಪಿಯ ವಿರೂಪಾಕ್ಷ ದೇವಳದಲ್ಲಿ ಧ್ಯಾನಸ್ಥರಾಗಿದ್ದ ವಿದ್ಯಾರಣ್ಯರ ಬಳಿಬಂದು ನಿವೇದಿಸಿಕೊಳ್ಳು ತ್ತಾರೆ. ಇದೇ ವಿಷಯವನ್ನೊಳಗೊಂಡ ಶಾಸನಗಳು ರಚನೆ ಗೊಂಡು ಅಂದು ವಿದ್ಯಾರಣ್ಯರಿಂದ ವಿದ್ಯಾನಗರ ಸ್ಥಾಪನೆ ಯಾಗಿ ಮುಂದೆ ಪ್ರೌಢದೇವರಾಯ ಶ್ರೀಕೃಷ್ಣದೇವರಾ ಯನಿಂದ ಸಾಮ್ರಾಜ್ಯ ಇಡೀ ದಕ್ಷಿಣಭಾರತವನ್ನು ತನ್ನ ಅಧೀನದಲ್ಲಿಟ್ಟುಕೊಂಡು ಇಸ್ಲಾಂ ಆಕ್ರಮಣವು ದಕ್ಷಿಣಕ್ಕೆ ಕಾಲಿಡದಂತೆ ಹಿಂದೂ ಧರ್ಮವನ್ನು ರಕ್ಷಿಸಿದ ವಿಶ್ವವಿಖ್ಯಾತ ಸಾಮ್ರಾಜ್ಯವಾಗುತ್ತದೆ. ಇಷ್ಟು ಈಗಿರುವ ಶಾಸನಗಳಾಧರಿತ ವಿಜಯನಗರ ಸ್ಥಾಪನೆಯ ಇತಿಹಾಸ.

ಆದರೆ, ಹಕ್ಕಬುಕ್ಕ ವಿದ್ಯಾರಣ್ಯರಿಗಿಂತ ಮೊದಲು ನಾಯಕ ಜನಾಂಗದ ಕುಮ್ಮಟದುರ್ಗದ ರಾಜರುಗಳೂ ಸುಲ್ತಾನರೊಡನೆ ಹೋರಾಡಿ ಹಿಂದೂಧರ್ಮ ಮತ್ತು ಸಂಸ್ಕೃತಿಯನ್ನು ರಕ್ಷಿಸಿರುವುದು ಇತಿಹಾಸದಲ್ಲಿ ಖಂಡಿತಾ ಸುಳ್ಳಲ್ಲ. ಆದರೆ ಆ ಕಾಲಮಾನದ ಶಾಸನಗಳ ಅಲಭ್ಯತೆಯಿಂದಾಗಿ ಕುಮ್ಮಟದುರ್ಗದ ಗಟ್ಟಿಯಾದ ಇತಿಹಾಸ ಇನ್ನೂ ನಮಗೆ ಪರಿಚಿತವಾಗಿಲ್ಲ. ಇದರಿಂದಾಗಿ ಗಂಡು ಗಲಿ ಕುಮಾರರಾಮನ ಶೌರ್ಯ ಆಳ್ವಿಕೆ ರಾಜ್ಯಭಾರದ ಸಂಪೂರ್ಣ ಚಿತ್ರಣದ ಕೊರತೆಯಿಂದ ಕುಮಾರರಾಮ ಇತಿಹಾಸದಿಂದ ದೂರ ಸರಿಯುವ ಅಪಾಯವಿದೆ. ಈ ದೃಷ್ಟಿಕೋನ ದಿಂದಲೇ ಡಾ. ಮೂರ್ತಿಗಳು ತೊಂಬತ್ತರ ಇಳಿವಯಸ್ಸಿನಲ್ಲೂ ಸಂಶೋಧನೆಯ ಧರ್ಮದಲ್ಲಿ ತೊಡಗಿಸಿಕೊಂಡಿದ್ದಾರೆ. ಇದೇ ಹಾದಿಯಲ್ಲಿ ಮೊನ್ನೆಯ ಪ್ರವಾಸದಲ್ಲಿ ವಿದ್ಯಾರಣ್ಯ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿದ್ದರು. ವಿವಿಯ ಮುಖ್ಯ ಕಛೇರಿಯಲ್ಲಿ ಕುಲಪತಿಗಳಿರದ ಕಾರಣ ಕುಲಸಚಿವ ಡಾ. ಎ. ಸುಬ್ಬಣ್ಣ ರೈ ಅವರನ್ನು ಭೇಟಿಯಾಗಿ ಕೆಲ ಮಾಹಿತಿಗಳನ್ನು ಕಲೆಹಾಕಿದರು.

ಕನ್ನಡ ವಿಶ್ವವಿದ್ಯಾಲಯ ಭುವನೇಶ್ವರಿದೇವಿಯ ನೆಲೆಯಾದ ಹಂಪಿಯ ವ್ಯಾಪ್ತಿಯಲ್ಲಿ ಸ್ಥಾಪನೆಗೊಳ್ಳಲು ಚಿಮೂ ಅವರ ಶ್ರಮ ಏನೆಂಬುದು ಕೆಲವರಿಗೆ ಮಾತ್ರ ತಿಳಿದು ಅವರನ್ನು ಕಂಡ ಕೂಡಲೇ ಕಾಲಿಗೆರಗಿ ನಮಸ್ಕರಿಸುತ್ತಾರೆ. ಒಟ್ಟಿನಲ್ಲಿ ಕನ್ನಡಿಗರಾದ ನಮಗೆ ನಾಡಿನ ಸತ್ಯ ಇತಿಹಾಸ, ಕುಮಾರರಾಮನಿಗೆ ಸಲ್ಲಬೇಕಾದ ಸಹಜ ಗೌರವ ದೊರಕಿ ಆತನನ್ನು ಎಲ್ಲಾ ಜಾತಿಯವರೂ ಆರಾಧಿಸುವಂತಾಗಲಿ.